## ಮಳೆನೀರಿನ ಕನ್ನಡಿ ಬಿಂಬಗಳು

'ನಿಮ್ಮೊಡನೆ' ಪುಟದಲ್ಲಿ 'ರಸ್ತೆಗಳಲ್ಲಿ ಮೈದಳೆದ ಮಳೆನೀರಿನ ಕನ್ನಡಿಯಲ್ಲಿ ಕಾಣಿಸುತ್ತಿರುವ ಬಿಂಬಗಳು ಹೇಳುತ್ತಿರುವುದೇನು? (ರಘುನಾಥ ಚ.ಹ., ಸೆ. 22) ಲೇಖನ, ಮಳೆಯ ಕಾರಣದಿಂದ ಉಂಟಾಗುವ ಯೋಜನಾರಹಿತ ಬೆಂಗಳೂರಿನ ಅವ್ಯವಸ್ಥೆಯ ಕ್ಷಕಿರಣ ಬರಹವಾಗಿದೆ. ಅದು ಮುಂಗಾಣ್ಕೆರಹಿತ, ಹೊಣೆಗೇಡಿಗಳ ರೋಗ ಲಕ್ಷಣ ರೂಪಕವಾಗಿ ಚಿತ್ರಿತವಾಗಿರುವ ರೀತಿ ವಿಶೇಷವಾಗಿದೆ.

—ಜಿ. ಕೃಷ್ಣಪ್ಪ, ಬೆಂಗಳೂರು

## 'ಮಕ್ಕಳು ಓದುತ್ತಿಲ್ಲವೆಂದರೆ...'

'ಮಕ್ಕಳು ಓದುತ್ತಿಲ್ಲ ಅಂದರೆ ದೊಡ್ಡವರು ಓದುತ್ತಿಲ್ಲ ಎಂದರ್ಥ' (ಸಂ: ರಾಘವೇಂದ್ರ ಕೆ. ತೊಗರ್ಸಿ, ಸೆ. 22) ತಮ್ಮಣ್ಣ ಬೀಗಾರ ಅವರ ಸಂದರ್ಶನ ಓದುವಾಗ 'ಮನೆಯೇ ಮೊದಲ ಪಾಠಶಾಲೆ' ಎಂಬ ಗಾದೆಮಾತು ನೆನಪಾಯಿತು. ಮಕ್ಕಳ ಶಿಕ್ಷಣದಲ್ಲಿ ಹೆತ್ತವರ ಪಾತ್ರ ಹಾಗೂ ಶಿಕ್ಷಣದ ಅಗತ್ಯವನ್ನು ತಿಳಿಸುವ ಮಾಹಿತಿಯನ್ನು ಒಳಗೊಂಡ ಲೇಖನ ಅರ್ಥಪೂರ್ಣವಾಗಿತ್ತು.

—ಅಭಿಷೇಕ್, ಬೆಂಗಳೂರು

## ಕಣ್ಮರೆಯ ಕಾಡಿನತ್ತ ಕರಿ ಮರ

'ಕಣ್ಮರೆಯ ಕಾಡಿನತ್ತ ಕರಿ ಮರ' (ವಿನು ಗಂಗೆ, ಸೆ. 22) ಲೇಖನ ಅಳಿವಿನಂಚಿನಲ್ಲಿರುವ ಬಹೂಪಯೋಗಿ ಬೀಟೆ ಮರದ ಬಗ್ಗೆ ಉತ್ತಮ ಮಾಹಿತಿ ನೀಡುತ್ತದೆ. ಗೋಣಿ, ಮಾಪಾಳ, ದೇವದಾರು ಮರಗಳ ಬಗ್ಗೆಯೂ ಈ ಲೇಖಕರು ಹಿಂದಿನ ಸಂಚಿಕೆಗಳಲ್ಲಿ ಉಪಯುಕ್ತ ವಿವರ ನೀಡಿರುತ್ತಾರೆ. ಈ ಬಗೆಯ ಅಳಿವನ್ನು ತಪ್ಪಿಸಲು ಸಾಧ್ಯವಾದವರೆಲ್ಲರೂ ಎಲ್ಲಾ ಬಗೆಯಲ್ಲೂ ಶ್ರಮಿಸೋಣ.

—ಎಂ. ನಾರಾಯಣ, ಶಿವಮೊಗ್ಗ

ಲೇಖನ ತುಂಬಾ ಉಪಯುಕ್ತ ಮಾಹಿತಿಗಳನ್ನು ಒಳಗೊಂಡಿದೆ. ಕರಿ ಮರ ಬಳ್ಳಾರಿ ಜಿಲ್ಲೆ ಸಂಡೂರು ಹೊಸಪೇಟೆ ಅರಣ್ಯ ವಲಯದಲ್ಲಿ ಯಥೇಚ್ಛವಾಗಿತ್ತು. ಈಗ ಅವನತಿ ಸಾಲಿನಲ್ಲಿ ಇದೆ.

—ಎಂ. ನಾಗರಾಜ, ಹೊಸಪೇಟೆ

## ನಾರಿಕೇಳ!

'ನಾರಿಕೇಳ! ಇದು ಕಲೆಯ ಕಾಲ' (ಸುನೀಲ್ ಬಾರ್ಕೂರ್, ಸೆ.22) ಲೇಖನದ ಮೂಲಕ ತೆಂಗಿನ ಉಪಯುಕ್ತತೆಯ ಬಗ್ಗೆ ತಿಳಿಯಿತು. ಕಲೆ ಕಲಾಕೃತಿಗಳ ವಿಚಾರ ಬಂದಾಗ ಕರ್ನಾಟಕದ್ದು ಕೂಡಾ ಎತ್ತಿದ ಕೈ.

—ರಾಬರ್ಟ್, ಬೆಂಗಳೂರು



## ಸಸ್ಯಗಳಲ್ಲೂ ಹಾರ್ಮೋನುಗಳು!

'ಮನುಷ್ಯರಲ್ಲಷ್ಟೇ ಅಲ್ಲ, ಸಸ್ಯಗಳಲ್ಲೂ ಹಾರ್ಮೋನುಗಳು!' (ಸೀಮಾ ಹೆಗಡೆ, ಸೆ.22) ಲೇಖನ ತುಂಬ ಚೆನ್ನಾಗಿ ಮೂಡಿ ಬಂದಿವೆ. ಸಸ್ಯಗಳ ಬೆಳವಣಿಗೆಯಲ್ಲಿ ಹಾಗೂ ರೋಗ ನಿಯಂತ್ರಿಸುವಲ್ಲಿ ಅವುಗಳ ಪಾತ್ರದ ಕುರಿತು ಲೇಖನವು ಉಪಯುಕ್ತವೂ ಕುತೂಹಲಕಾರಿಯೂ ಆಗಿದೆ.

—ಸುಮಂಗಲಾ, ವಿಜಯಪುರ

ಸಸ್ಯಗಳಲ್ಲಿನ ಹಾರ್ಮೋನುಗಳ ಬಗ್ಗೆ ತುಂಬ ಕುತೂಹಲಕಾರಿಯಾಗಿ ವಿವರಗಳನ್ನು ಕಟ್ಟಿಕೊಟ್ಟಿದ್ದಾರೆ ಲೇಖಕಿ. ಬರಿಗಣ್ಣಿಗೆ ಕಾಣಿಸದ ಹಾರ್ಮೋನ್ ಮ್ಯಾಜಿಕ್ ಕುರಿತು ತುಂಬ ಸರಳವಾಗಿ, ಅಷ್ಟೇ ಸುಲಲಿತವಾಗಿ ಬರೆದಿರುವ ಅವರಿಗೆ ಧನ್ಯವಾದಗಳು. 'ಸುಧಾ' ಪತ್ರಿಕೆ ಹೀಗೆ ಹೆಚ್ಚಾಗಿ ಬೇರೆ ಮಾಧ್ಯಮಗಳು, ಪತ್ರಿಕೆಗಳು ಗಮನಹರಿಸದ ಅಪರೂಪದ ವಿಷಯ, ವಿದ್ಯಮಾನಗಳ ಕುರಿತು ಸತತವಾಗಿ ಲೇಖನ ಪ್ರಕಟಿಸುತ್ತಿರುವುದು ಖುಷಿ ಕೊಡುತ್ತದೆ. ಇವೆಲ್ಲವೂ ಸೇರಿ 'ಸುಧಾ'ಗೆ ಅನನ್ಯವಾದ ಸಿಗ್ನೇಚರ್ ಅನ್ನು ನೀಡಿದೆ.

—ಪರಮೇಶ್ವರ ಕೆ.ಎಂ., ಬಾಳಗೋಡು

## ಓ ಮೈ ಬಾಡಿಗಾಡ್!

'ಓ ಮೈ ಬಾಡಿಗಾಡ್!' (ಡಾ. ಪ್ರೇಮಲತಾ ಬಿ. ಸೆ. 22) ಮುಖಪುಟ ಲೇಖನ ಸೊಗಸಾಗಿತ್ತು. ನಮಗೆ ಇದುವರೆಗೆ ಅರಿವಿಲ್ಲದ ಸಾಕಷ್ಟು ಮಾಹಿತಿಗಳನ್ನು ತಿಳಿಸಿಕೊಟ್ಟಿತು. ಇಂಥ ಲೇಖನ ಪ್ರಕಟಿಸಿದ್ದಕ್ಕೆ 'ಸುಧಾ'ಗೆ ಥ್ಯಾಂಕ್ಯೂ.

—ಮಹಾಂತೇಶ್ ಬಿದರಿಮಠ, ಹುಬ್ಬಳ್ಳಿ



ಮನುಷ್ಯ ದೇಹದ ವಿಕಾಸದ ಕುರಿತು ವಿವರಣೆ ನೀಡುವ ಈ ವಾರದ ಮುಖಪುಟ ಲೇಖನ ಅತ್ಯದ್ಭುತವಾಗಿದೆ. ನಮ್ಮ ದೇಹದ ಒಳಗೇ ಅದೆಂಥ ಅಚ್ಚರಿಯ ಜಗತ್ತು ಅಡಗಿದೆ ಎಂದು ತಿಳಿದು ದಿಗ್ಭ್ರಮೆಯಾಯಿತು.

—ನಾಗವೇಣಿ, ಕಗ್ಗಲಿಪುರ

## ಪಡ್ಡೆ ಹೈಕಳ ಟ್ರೆಂಡಿ ಹೇರ್‌ಸ್ಟೈಲ್

'ಪಡ್ಡೆ ಹೈಕಳ ಟ್ರೆಂಡಿ ಹೇರ್‌ಸ್ಟೈಲ್' (ಶಶಿಕುಮಾರ್ ಸಿ., ಸೆ. 22) ಬರಹ ಚೆನ್ನಾಗಿತ್ತು. ಕೇಶವಿನ್ಯಾಸದ ಮೂಲಕ ಗಮನಸೆಳೆಯಲು ಬಯಸುವುದು ತಪ್ಪಲ್ಲ, ಆದರೆ ತಮ್ಮ ವ್ಯಕ್ತಿತ್ವ, ದೇಹಸ್ವರೂಪಕ್ಕೆ ಅನುಗುಣವಾಗಿ ಕೇಶವಿನ್ಯಾಸ ಮಾಡಿಕೊಂಡರೆ ಆಗ ಅದು ಸಾರ್ಥಕವಾಗುತ್ತದೆ.

—ದೀನಾನಾಥ ಚೊಬ್ಬೆ, ಜೋಯಿಡ

## ಮದುವೆಯ ಈ ಬಂಧ

'ಮದುವೆಯ ಈ ಬಂಧ' (ಬಿ.ಎಲ್. ವೇಣು, ಸೆ. 22) ಕಥೆ ಸೊಗಸಾಗಿದೆ. ಲವಲವಿಕೆಯಿಂದ ಓದಿಸಿಕೊಂಡು ಹೋಗುತ್ತದೆ. ವರದಕ್ಷಿಣೆ ಪಿಡುಗನ್ನು ಮುಖ್ಯ ಕೇಂದ್ರವಾಗಿಟ್ಟುಕೊಂಡು, ಇತ್ತೀಚಿನ ಉದ್ಯೋಗ ನೇಮಕಾತಿ ಅಕ್ರಮ ಪ್ರಕರಣಗಳ ಹಿನ್ನೆಲೆಯಲ್ಲಿ ನಾಯಕಿ ಮೀನಾಕ್ಷಿ, ರಮೇಶನನ್ನು ರಿಜೆಕ್ಟ್ ಮಾಡುವ ಸನ್ನಿವೇಶವನ್ನು ಅತ್ಯಂತ ಹೃದಯಂಗಮವಾಗಿ ಕಟ್ಟಿಕೊಟ್ಟಿರುವ ಕಥೆಗಾರರಿಗೆ ಅಭಿನಂದನೆಗಳು.

—ವೈ. ಬಿ.ಎಚ್. ಜಯದೇವ್, ಬೆಂಗಳೂರು

ಕಥೆ ಸಂದರ್ಭೋಚಿತವಾಗಿದೆ. ವಿನೋದ, ವಿಡಂಬನೆಯೊಂದಿಗೆ ಓದಿಸಿಕೊಂಡು ಹೋಗುವ ಕಥೆ, ವರ್ತಮಾನದ ಪ್ರಸ್ತುತತೆಗೆ ಹಿಡಿದ ಕನ್ನಡಿಯಾಗಿದೆ.

—ಅಶೋಕ ಎಚ್.



**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in